ಅ) ಮೆಸರ್ಸ್ ಬಿ.ಜಿ. ಶಿರ್ಕೆ ಮತ್ತು ಕಂಪೆನಿ, ಪುಣೆ.

ಆ) 1) ಐದು.

2) ಮೊದಲ ಸಲ ಒಂದು ಮತ್ತು ಎರಡನೆ ಸಲ ನಾಲ್ಕು ಟೆಂಡರುಗಳನ್ನು ಬಹಿರಂಗಪಡಿಸಿದೆ.

ಇ) 1) ರೂ. 5,58,00000

2) ಒಪ್ಪಂದದ ಪ್ರಕಾರ ಬಡ್ಡಿಯಿಲ್ಲ.

ಈ) ಟೆಂಡರ್ ನಿಬಂಧನೆಗಳ ಪ್ರಕಾರ ಒಟ್ಟು ಹಣದ (ರೂ. 34,92,16,145-00) ಶೇಕಡ 10 ರಷ್ಟನ್ನು ಸಿದ್ಧತೆ ಹಣವನ್ನಾಗಿಯೂ (Mobilization Advance) ಮತ್ತು ಶೇಕಡ 6 ರಷ್ಟನ್ನು ಯಂತ್ರ ಸಲಕರಣೆ (plants/ Machinery) ಗಳಿಗೋಸ್ಕರ ಕೊಟ್ಟಿದೆ.

ಉ) 3577

ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಸಮಗ್ರ ನಲ್ಲಿ ನೀರಿನ ಯೋಜನೆ ಬಗ್ಗೆ.

3208 - ಶ್ರೀ ಬಿ. ರಮಾನಾಥರೈ (ಬಂಟ್ವಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಸಮಗ್ರ ನಲ್ಲಿ ನೀರಿನ ಯೋಜನೆಯನ್ನು ಎಂದು ಕೈಗೆತ್ತಿಕೊಳ್ಳಲಾಗುವುದು.

ಆ) 1991-92ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಹಣಕಾಸು ಇಲಾಖೆಗೆ ಒಪ್ಪಿಗೆ ನೀಡುವುದೇ ಈ ಬಗ್ಗೆ ಈಗಾಗಲೇ ನೀಡಲಾಗಿದ್ದು ಭರವಸೆ ಯಾವ ಹಂತದಲ್ಲಿದೆ?

ಇ) ಈ ಯೋಜನೆಯನ್ನು ಆದಷ್ಟು ಬೇಗನೆ ಕೈಗೆತ್ತಿಕೊಳ್ಳಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರದ ಆಡಳಿತಾತ್ಮಕ ಅನುಮೋದನೆಯ ನಂತರ, ಬಂಟ್ವಾಳ ಪಟ್ಟಣದ ನೀರು ಸರಬರಾಜಿನ ರೂ. 99.95 ಲಕ್ಷಗಳ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಈ ಯೋಜನೆಯನ್ನು 1991-92ರ ಸಾಲಿನಲ್ಲಿ ಪ್ರಸ್ತಾಪಿಸಲಾಗಿದೆ.

ಇ) ಪ್ರಸ್ತಾವನೆ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಎ ಮತ್ತು ಬಿ ಅಧಿಕಾರಿಗಳ ಬಗ್ಗೆ

3104 - ಶ್ರೀ ಗೋಪಿನಾಥ ಆರ್. ಸಾಂಡ್ರ(ಹುಬ್ಬಳ್ಳಿ-ಗ್ರಾಮಾಂತರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಂದನೇ ಮತ್ತು ಎರಡನೇ ದರ್ಜೆಗಳ ಅಧಿಕಾರಿಗಳಲ್ಲಿ ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು? ಜಾತಿವಾರು ವಿವರ ತಿಳಿಸುವುದು, ಅವರಲ್ಲಿ ಉತ್ತರ ಕರ್ನಾಟಕದವರು ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):

ಅ) ರಾಜ್ಯದಲ್ಲಿ, ದಿನಾಂಕ 31-3-1990 ರ ವೇಳೆಗೆ 11,713 'ಎ' ವೃಂದದ ಅಧಿಕಾರಿಗಳು ಮತ್ತು 20,008 'ಬಿ' ವೃಂದದ ಅಧಿಕಾರಿಗಳು ಇದ್ದರು. ಇವರಲ್ಲಿ

ಪರಿಶಿಷ್ಟ ಜಾತಿಗೆ ಸೇರಿದ ಅಧಿಕಾರಿಗಳು 1549 'ಎ' ವೃಂದದ ಹುದ್ದೆಗಳಲ್ಲಿಯೂ 1511 'ಬಿ' ವೃಂದದ ಹುದ್ದೆಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದರು ಹಾಗೂ ಪರಿಶಿಷ್ಟ ಬುಡಕಟ್ಟು ಜಾತಿಗಳಿಗೆ ಸೇರಿದ ಅಧಿಕಾರಿಗಳು 258 'ಎ' ವೃಂದದ ಹುದ್ದೆಗಳಲ್ಲಿ, 345 'ಬಿ' ವೃಂದದ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಹಿಂದುಳಿದ ವರ್ಗಗಳಿಗೆ ಸೇರಿದ ಅಧಿಕಾರಿಗಳ ಬಗ್ಗೆ ಮಾಹಿತಿ ಸಂಗ್ರಹಣೆ ಇಲ್ಲ. ಸರ್ಕಾರ ನೌಕರರ ಬಗ್ಗೆ ಜಾತಿವಾರು ಮಾಹಿತಿಯನ್ನಾಗಲೀ ಅಥವಾ ಪ್ರಾಂತೀಯವಾರು ಮಾಹಿತಿಯನ್ನಾಗಲೀ ಸಂಗ್ರಹಿಸಲಾಗುತ್ತಿಲ್ಲ.

ಜಿಲ್ಲಾ ಕೇಂದ್ರಗಳಲ್ಲಿ ಹೈಕೋರ್ಟ್ ಬೆಂಚು ಸ್ಥಾಪನೆ.

3290 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೈಕೋರ್ಟಿನ ಕಾರ್ಯಗಳನ್ನು ವಿಕೇಂದ್ರೀಕರಣಗೊಳಿಸಿ ಜಿಲ್ಲಾ ಕೇಂದ್ರಗಳಲ್ಲಿ ಹೈಕೋರ್ಟ್ ಬೆಂಚಿನ ಪ್ರಸ್ತಾವ ಸರಕಾರ ಇಟ್ಟುಕೊಂಡಿದೆಯೇ?

ಆ) ಬೆಂಗಳೂರು ಬಿಟ್ಟು ರಾಜ್ಯದ ಬೇರೆ ಯಾವ ಜಿಲ್ಲಾ ಕೇಂದ್ರದಲ್ಲಿ ಹೈಕೋರ್ಟ್ ಬೆಂಚ್ ಸ್ಥಾಪನೆಗೆ ರಾಜ್ಯ ಸರಕಾರ ಸುಪ್ರೀಂ ಕೋರ್ಟಿನ ಅನುಮತಿಯನ್ನು ಕೋರಿದೆ.

ಶ್ರೀ ಎಸ್. ಬಂಗಾರಪ್ಪ(ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಅಲೆಮಾರಿ ಜನಾಗಂದವರಿಗೆ ಮನೆ ಮತ್ತು ನಿವೇಶನ ಹಂಚುವುದು

3258 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಪುರಸಭೆ, ನಗರಸಭೆ ಹಾಗೂ ಕಾರ್ಪೊರೇಷನ್‌ಗಳ ವ್ಯಾಪ್ತಿಯಲ್ಲಿ ವಾಸವಾಗಿರುವ ಕುಟುಂಬಗಳೆಷ್ಟು ?(ವಿವರವನ್ನು ಒದಗಿಸುವುದು)

ಆ) 1991-92ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಸದರಿ ಜನಾಂಗದವರಿಗೆ ಶೇ 10ರ ಮೀಸಲಾತಿಯನ್ವಯ ಮನೆ ಮತ್ತು ನಿವೇಶನಗಳನ್ನು ಹಂಚಲು ಘೋಷಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಪುರಸಭೆ, ನಗರಸಭೆ, ಕಾರ್ಪೊರೇಶನ್ ಹಾಗೂ ಗೃಹ ನಿರ್ಮಾಣ ಮಂಡಳಿಗಳ ವ್ಯಾಪ್ತಿಯಲ್ಲಿ ನಿರ್ಮಿಸುವ ಮನೆ ಮತ್ತು ನಿವೇಶನಗಳನ್ನು ಶೇ 10ರ ಮೀಸಲಾತಿಯನ್ವಯ ಹಂಚಲು ಸರ್ಕಾರಿ ಆದೇಶ ಹೊರಡಿಸಿದೆಯೇ. ಹಾಗಿದ್ದಲ್ಲಿ ಸದರಿ ಆದೇಶಗಳ ಪ್ರತಿಯನ್ನೊದಗಿಸುವುದು.

ಈ) ಇಲ್ಲದಿದ್ದಲ್ಲಿ ಈ ಮೀಸಲಾತಿ ಪದ್ಧತಿಯನ್ನು ಎಂದಿನಿಂದ ಜಾರಿಗೆ ತರಲಾಗುವುದು ಹಾಗೂ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 1) ಹೌದು.

2) ಕುಟುಂಬಗಳ ಮಾಹಿತಿ ಲಭ್ಯವಿರುವುದಿಲ್ಲ.